ಅಸಲು ದಾವೆ ನಂ.46/2016

ಡಿ.ಡಬ್ಲೂಃ 5-ಪವಿತ್ರ ವಿ ಕೋಂ ಲಕ್ಷ್ಮಿಪತಿ ಆರ್.

ದಿನಾಂಕಃ 19/06/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಎನ್.ಎಂ. ವಕೀಲರಿಂದ**

1. ನಾನು 7 ಮತ್ತು 8 ನೇ ಪ್ರತಿವಾದಿಯವರಿಂದ ಖರೀದಿಸಿರುವ ದಾವಾ ಸ್ವತ್ತು ವಾದಿಯರ ಒಟ್ಟು ಕುಟುಂಬದ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತು ಖರೀದಿಸುವಾಗ ಈ ದಾವೆ ವಿಚಾರಣೆಯಲ್ಲಿತ್ತು ಎಂದರೆ ಸರಿ ಆದರೆ ನನಗೆ ಆಗ ಗೊತ್ತಿರಲಿಲ್ಲ. ನಾನು ದಾವಾ ಸ್ವತ್ತನ್ನು ಅದರ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಿ 7 ಮತ್ತು 8 ನೇ ಪ್ರತಿವಾದಿಯರ ಹತ್ತಿರ ಕೂಲಂಕುಶವಾಗಿ ವಿಚಾರಣೆ ಮಾಡಿ ನಂತರ ಖರೀದಿಸಿರುತ್ತೇನೆ. ದಾವಾ ಸ್ವತ್ತು 7 ನೇ ಪ್ರತಿವಾದಿಗೆ ಯಾವ ರೀತಿಯಿಂದ ಬಂದಿತ್ತು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ದಾವಾ ಸ್ವತ್ತನ್ನು 8 ನೇ ಪ್ರತಿವಾದಿಯು 2 ನೇ ಪ್ರತಿವಾದಿಯಾದ ಮೃತ ನಾರಾಯಣ ಸ್ವಾಮಿ ರವರಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 8 ನೇ ಪ್ರತಿವಾದಿಯು 2 ನೇ ಪ್ರತಿವಾದಿಯಿಂದ ದಾವಾ ಸ್ವತ್ತು ಖರೀದಿಸಿರುವ ವಿಚಾರ ಮತ್ತು ದಾವಾ ಸ್ವತ್ತು ವಾದಿಯರ ಕುಟುಂಬದ ಸ್ವತ್ತು ಆಗಿರುತ್ತದೆ ಎಂಬ ವಿಚಾರ ನನಗೆ ಗೊತ್ತಿದ್ದು ನಾನು ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಆರ್.ಪಿ. ವಕೀಲರಿಂದ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**ಪಾಟೀ ಸವಾಲು 3 ನೇ ಪ್ರತಿವಾದಿ ಪರವಾಗಿ ಶ್ರೀ ಟಿ.ಎನ್.ಸಿ. ವಕೀಲರಿಂದ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**ಪಾಟೀ ಸವಾಲು ಪ್ರತಿವಾದಿ ಸಂಖ್ಯೆ 2(ಎ) ರಿಂದ (ಸಿ)ನೇ ರವರ ಪರವಾಗಿ ಶ್ರೀ ಪಿ.ಎನ್.ಕೆ.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ತಿಳಿಸಿರುತ್ತಾರೆ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್